Shankara Building Products Limited ®

Date: 11th June, 2021

To
Department of Corporate services
BSE Limited
1st Floor, New Trading Ring,
Rotunda Building, Phiroze Jeejeebhoy
Towers, Dalal Street, Fort,
Mumbai-400001
Scrip Code: - 540425

To
Listing Department
National Stock Exchange of India Limited
Exchange Plaza, Plot No. C-1,
G Block, Bandra Kurla Complex,
Bandra (E)
Mumbai- 400051
Symbol- SHANKARA

Dear Sir/ Madam,

Sub: Regulation 47 of SEBI (Listing Obligations and Disclosure Requirements) Regulations, 2015.

We are forwarding herewith copies of newspaper cuttings of Audited Financials as published in the following newspapers:-

Name	**Date of Publishing**
The Business Standard	11th June, 2021
Kannada Prabha	11th June, 2021

We request you to take above information on record.

Thanking You

Yours faithfully,
For **Shankara Building Products Limited**

Ereena Vikram
Company Secretary & Compliance Officer

SHANKARA BUILDING PRODUCTS LTD. BANGALORE

G2- Farah Winsford, No-133, Infantry Road,
Bangalore – 560001, Karnataka.
Ph : 080-4011 7777 , Fax – 080 4111 9317
CIN No.: L26922KA1995PLC018990
www.shankarabuildpro.com

Global tax, local complexities

The recent G7 proposal of a global minimum tax has mixed implications for Indian corporations, foreign majors operating here and the tax authorities

SUBHOMOY BHATTACHARJEE
New Delhi, 10 June

The global minimum corporation tax of 15 per cent suggested by the G7 nations at the summit of their finance ministers last weekend, could make life more taxing for some large Indian IT companies. The tax could, for instance, cost TCS, India's largest IT services company, more under the new tax treatment, but Infosys may just about get away because it still does not rank among the top 100 digital multinationals by size.

Indian conglomerates such as Airtel and Tata group with substantial investments abroad may not be able to retain the benefits of their tax shelters abroad because, under the structure of this tax, Indian revenue authorities could mop up the differential tax.

All these tax scenarios are, of course, going to be intensely argued before they enter the statute books. The agreement in London, will now be debated by the G20 group of finance ministers later this year. Only after the heads of state of the G20 accept the framework would this agreement be adopted by the legislatures of the respective countries. So it is a long road ahead.

International attention is, nevertheless, focused on how, after years of debate, the G7 nations have accepted a two-pillar solution to taxing multinational companies more intensely. Pillar two has drawn more attention — it mandates a minimum rate of 15 per cent corporation tax, effectively ending the attraction of tax havens for multinational companies. For Indian tax authorities, it is pillar one of this agreement which carries the more serious macro-implications.

Under this pillar is the question of tax treatment of IT or digital companies. US Treasury Secretary Janet Yellen has said she wants countries to get the "taxing rights on at least 20 per cent of profit exceeding a 10 per cent margin for the largest and most profitable multinational enterprises". Behind the ringing tone note the words, *largest and most profitable.*

The US had carried a position to the London summit that only about 100 of the most profitable multi-national enterprises globally should be subject to this tax. Most such companies globally are the digital giants. In other words, if these companies have a significant market presence in any economy, they have to pay a substantive tax there. The Organisation for Economic Cooperation and Development (OECD), the club of rich countries representing the European Union interests more strongly, wanted no limit on the number of enterprises covered. The two italicised words imply that the US position has carried the day.

For India, this means that TCS might be subject to this tax abroad, wherever it has a presence. Interestingly, going by the same metric, Amazon with a lower than 10 per cent operating profit margin, will not fit into this club.

The Indian government is unlikely to agree to this position since all digital services companies, including Amazon, pay a 2 per cent tax on their transactions here. The US government last week set India and five other countries, including the UK and Germany, a time frame of 180 days to halt the tax and accept multilateral talks for a new taxation framework or face potential retaliatory tariffs from Washington.

The multilateral framework approved by G7 is, therefore, not an appealing one for New Delhi to accept because the effective tax India will levy may well be less than the scope of the digital tax it currently deploys. Also, Indian revenue authorities are keen to be able to potentially access more than the "20 per cent of profit exceeding the 10 per cent margin" of foreign companies that do business in India. The G7 declaration has used the word "at least," signifying that it is a floor, but chances are it could become a ceiling.

Otherwise, India could face a situation where as more domestic companies graduate to the 100 multinational club, those tapping into the Indian market will be able to duck the tax. This is possible since the foreign multinationals will be taxable on their India exposure. Profitability of these companies will be certainly thin, in any case lower than the threshold of 10 per cent.

The flip side is a brighter one for the tax department. Whenever Indian companies do a merger or acquisition abroad, they set up a special purpose vehicle to carry out the transaction. These vehicles earlier carried a Mauritius address, but lately also a Cayman Island registration. Both these destinations offer a zero corporation tax rate. India has a double taxation avoidance treaty with Mauritius and none with Cayman but the effect was the same. India earns no tax from these transactions. Under the proposed pillar two, India could soon impose the 15 per cent tax and demand compliance. Essentially countries like India can now demand that whenever an underlying Indian asset is taxed at a lower rate abroad, the companies will pay a tax to India also. The aggregate tax must add up to the magic number of 15 per cent.

The framework approved by G7 is not an appealing one for New Delhi to accept because the effective tax India will levy may well be less than the scope of the digital tax it currently deploys

It helps that the effective minimum corporation tax rate in India is at present about 17 per cent. This means India does not have to bother about tweaking its rate. These goodies will begin to roll in once the G7 agreement is ratified by the wider G20 group. The Indian tax authorities will be able to pass an omnibus correction to all the double taxation avoidance agreements. The correction will be deemed to have been inserted in each treaty. It will be a landmark amendment that could raise India's ability to tax offshore transactions by a quantum jump.

HAVEN-SENT OPPORTUNITIES



A ranking of jurisdictions most complicit in helping multinational corporations underpay corporate income tax. CTHI calculates each jurisdiction's tax and financial systems to create a list of the world's greatest enablers of global corporate tax abuse.
It is a creation of Tax Justice Network, an independent organisation supported by UN, IMF and others
*Corporate Tax Haven Index
Source: Tax Justice Network

'Businesswise, we are hopping across boundaries of the box'

Among the last to be allowed to resume business (that too partially) after months of restrictions, Indian cinemas had to close their doors again as the second wave of Covid struck. **AJAY BIJLI**, chairman and managing director, PVR Ltd, and **GAUTAM DUTTA**, CEO of PVR Ltd, tell **Veenu Sandhu** that though difficult, this has been a period of introspection and innovation. Edited excerpts:


Ajay Bijli


Gautam Dutta

Q&A
AJAY BIJLI
Chairman & MD, PVR Ltd
GAUTAM DUTTA
CEO, PVR Ltd

After the first lockdown lifted, you were repeatedly asking for cinemas to be allowed to open. This time the messaging from you is different.

Ajay Bijli: This virus is something that likes human interaction; that's how it spreads. So we are one of the most affected industries. It's not a good sign to be shut for so many months. So yes, it has been devastating from that point of view. But I still believe in the long run of the business. And as Gautam has very nicely articulated in a message that we are sending out: "For the show called life to continue, this intermission is a must." After the first lockdown, our outreach was aggressive. This time, it didn't seem right to start talking about entertainment when people and hospitals were overwhelmed.

There are few factors that keep us optimistic. One of them is that the Indian market considers movie-going as the Number 1 form of entertainment. We got a small glimpse of this when we opened from October 15 (2020) to March 15 (2021). The movies that were released did very well.

So the threat of OTT gaining at the cost of theatre isn't really there?

Bijli: OTT versus going to the movies is something like "utilitarian versus experiential"; like eating out of a microwave versus going to a restaurant. The film fraternity continues to believe in the theatrical business — not just for emotional reasons but also for economic ones; 60 to 70 per cent revenue of any content that is created comes from theatre.

That said, if my shop is shut, then how can I stop them from selling their movie to OTT. So if they sold it, they sold it. But I know for a fact that a lot of movies are lined up, both Indian and international (for when the cinemas open).

The industry is bleeding. How could things have been helped?

Bijli: The only thing that would have helped was if we had got some government support. We made many representations to the government, yet no relief has come. Be that as it may, we have still tried to keep our chin up. There is one way the government can help, if not directly: vaccinate at a faster pace. Do it for the sake of humanity.

We ourselves are doing our best within what all is available, legitimately, to get our people (some 6,700 employees) and their families vaccinated.

Even so, how do you keep the show going?

Gautam Dutta: We looked within for business ideas to keep the wheels rolling. We innovated around food and launched PVR microwave popcorn that is selling like a hot cake today. We have also set up a core team to look at businesses like merchandise that can go online. Another food venture we launched is Café V, to deliver food to homes through cloud kitchens. We are also looking at alternative content stories within cinemas. In short, we are hopping across the boundaries of the box to see how PVR can leverage its position of strength from here on.

What about things like rental costs?

Bijli: I am happy to say that we got rental relief from more than 95 per cent of the developers. We are a listed company, so we also had to keep talking to our investors. We were able to do a rights issue of ₹300 crore — a testimony to the belief in our company. We were also able to do a QIP of ₹800 crore later on. A huge chunk of investors came in. And we were able to raise debt. All this in a shut business is not easy to achieve when everybody is only talking OTT.

Full interview on
www.business-standard.com

What are content delivery networks and why big websites crash together

NATE LANXON
10 June

You don't hear much about content-delivery networks, or CDNs, until they stop delivering. A global outage of major websites on June 8 that lasted about an hour was caused by problems at the San Francisco-based Fastly Inc. It took down websites including the New York Times, Bloomberg News and even the UK government.

What is a content-delivery network?

It's a kind of bridge between a website or app and a user, helping to push data quickly around the internet on behalf of some of the most popular online companies. CDN providers do that by hosting multiple servers and directing people who call up a web page to the nearest one geographically, rather than sending them back to the origin. Say a company's website is based in the US and gets traffic from France, it's possible a CDN provider has a server in France that will direct users there.

Who uses them?

Such networks are popular with large, high-traffic websites and those offering big files to download. The list of those affected by the June 8 outage included Amazon, Spotify, Twitch, Shopify and Etsy, according to Downdetector, a website that tracks service outages across the internet. Other major CDN providers include Cloudfare, Akamai and MaxCDN.

Why use them?

Along with speed and the greater ease of serving more customers simultaneously, CDNs are better placed to deliver content such as high-resolution video without disruption. They can also divert traffic to different servers if demand is high or there's a sudden spike, allowing websites to keep going when they're under strain. On the other hand, they are costly, do not have servers everywhere and, as evidenced by this latest episode, mean that companies are putting the fate of their websites in the hands of an outside party.

What happened with Fastly?

CDNs don't fail very often but when they do, it can be spectacular. There are many similarities between this outage and an issue with rival Cloudflare last year. Cloudflare's problems arose because — in simple terms — the company's engineers tried to re-route internet traffic and everything exploded. Since website traffic is routed through a CDN's servers, when the servers break so does everything else. These issues are also hard to prevent, and often happen when companies need to update their systems. Fastly attributed the incident to "a service configuration that triggered disruptions across our POPs (points of presence) globally".

Was this a hack?

There is no evidence to suggest Fastly's issues were the result of a malicious cyber-attack. By contrast, all website system administrators know that network outages and downtime can happen, no matter the size of their hosting platform. **BLOOMBERG**

Adfactors 98

ಎಲ್ಲಾ ಪಾಸ್: ಡಿಗ್ರಿ ಕಾಲೇಜು ಪ್ರವೇಶಕ್ಕೆ ಒತ್ತಡ

ಮೊದಲ ಪುಟದಿಂದ

ಪ್ರತಿ ವರ್ಷ 3ರಿಂದ 3.5 ಲಕ್ಷ ವಿದ್ಯಾರ್ಥಿಗಳು ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದರೆ ಈ ವರ್ಷ 4.5ರಿಂದ 5 ಲಕ್ಷ ಆಕಾಂಕ್ಷಿಗಳೂ ಪದವಿ ಕಾಲೇಜುಗಳ ಪ್ರವೇಶಕ್ಕೆ ಮುಂದಾಗಬಹುದೆಂದು ಅಂದಾಜಿಸಲಾಗಿದೆ. ಅಷ್ಟೂ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಸಾಮರ್ಥ್ಯ ನಮ್ಮ ಕಾಲೇಜುಗಳಿಗೆ ಇಲ್ಲ ಎಂದೇ ಶಿಕ್ಷಣ ತಜ್ಞರು ಹೇಳುತ್ತಾರೆ. ರಾಜ್ಯದಲ್ಲಿ ಇರುವ ಡಿಗ್ರಿ ಕಾಲೇಜುಗಳ ಸಂಖ್ಯೆ 2500.

ಹತ್ತಾರು ಸಮಸ್ಯೆ: ಹೀಗಾಗಿ ಇಷ್ಟು ಇದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕಾದರೆ ಕಾಲೇಜುಗಳ ಸೀಟಿನ ಸಂಖ್ಯೆ ಹೆಚ್ಚಿಸಬೇಕು. ಆದರೆ, ಆ ಪ್ರಕ್ರಿಯೆ ಸರಳವಲ್ಲ. ಕಾಲೇಜುಗಳಲ್ಲಿ ಸೀಟು ಸಂಖ್ಯೆ ಹೆಚ್ಚಿಸಲು ಸಂಬಂಧಿಸಿದ ವಿಶ್ವವಿದ್ಯಾಲಯಗಳು ಕಾಲೇಜುಗಳಲ್ಲಿ ಅಗತ್ಯದಷ್ಟು ಬೋಧಕ ವರ್ಗ, ಮೂಲಸೌಕರ್ಯ ಇದೆಯಾ ಎಂದು ಸಮಿತಿಗಳಿಂದ ಪರಿಶೀಲಿಸಿ ವರದಿ ಪಡೆದು ಸಿಂಡಿಕೇಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ನಿರ್ಧಾರ ಕೈಗೊಳ್ಳಬೇಕಿದೆ. ಇದಕ್ಕೆ ಸರ್ಕಾರ ಸ್ಪಷ್ಟ ನಿರ್ದೇಶನವನ್ನೂ ನೀಡಬೇಕು.

ಇದಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ. ಪರಿಶೀಲನೆ ಇಲ್ಲದೆ ನೇರ ಸೀಟು ಸಂಖ್ಯೆ ಹೆಚ್ಚಿಸಲು ಅವಕಾಶ ನೀಡಿದರೆ ಅವೈಜ್ಞಾನಿಕ ಕ್ರಮವಾಗಲಿದೆ. ಹಾಗಾಗಿ ಈ ಸಮಸ್ಯೆ ಪರಿಹಾರಕ್ಕೆ ಯಾವ ಪರಿಹಾರ ಮಾರ್ಗ ಹುಡುಕುವುದು ಎಂದು ಉನ್ನತ ಶಿಕ್ಷಣ ಇಲಾಖೆ ತಲೆಕೆಡಿಸಿಕೊಂಡಿದೆ.

ಖಾಸಗಿ ಕಾಲೇಜುಗಳ ಸಮಸ್ಯೆ ಈ ರೀತಿಯಿದ್ದರೆ ಸರ್ಕಾರಿ ಕಾಲೇಜುಗಳ ಸಮಸ್ಯೆಯೇ ವಿಭಿನ್ನ. ಏಕೆಂದರೆ, ನಿಯಮಾವಳಿ ಪ್ರಕಾರ ಸರ್ಕಾರಿ ಕಾಲೇಜುಗಳಿಗೆ ಎಷ್ಟೇ ಆಕಾಂಕ್ಷಿಗಳು ಪ್ರವೇಶ ಕೋರಿ ಬಂದರೂ ಪ್ರವೇಶ ನಿರಾಕರಿಸುವಂತಿಲ್ಲ. ಹಾಗೇನಾದರೂ ಆಕಾಂಕ್ಷಿಗಳೆಲ್ಲರಿಗೂ ಪ್ರವೇಶ ನೀಡದರೆ ಇದಕ್ಕೆ ಅಗತ್ಯದಷ್ಟು ತರಗತಿ ಕೊಠಡಿಗಳು, ಮೂಲಸೌಕರ್ಯ, ಬೋಧಕ ವರ್ಗ ಹೇಗೆ ಹೊಂದಿಸುವುದು, ಹೇಗೆ ನಿಭಾಯಿಸುವುದು ಎಂಬ ತಲೆನೋವು ಶುರುವಾಗಿದೆ.

ಸದ್ಯಕ್ಕೆ ಈ ಯಾವ ಸಮಸ್ಯೆಗೂ ಶಿಕ್ಷಣ ಇಲಾಖೆ ಬಳಿ ಪರಿಹಾರವಿಲ್ಲ. ಈ ಎಲ್ಲದಕ್ಕೂ ಪರಿಹಾರ ಸೂತ್ರಗಳನ್ನು ಹುಡುಕುವ ಹಾದಿಯಲ್ಲಿ ಕಾಲೇಜು ಶಿಕ್ಷಣ ಇಲಾಖೆ ನಿರತವಾಗಿದೆ. ಇದರಿಂದ ಈ ಬಾರಿ ಪದವಿ ಕಾಲೇಜುಗಳ ಪ್ರವೇಶ ಪ್ರಕ್ರಿಯೆ ಕೊಂಚ ತಡವಾಗುವ ಸಾಧ್ಯತೆ ಇದೆ.

5 ಲಕ್ಷ ಪ್ರವೇಶಾಕಾಂಕ್ಷಿಗಳು?: ಕಳೆದ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 6.75 ಲಕ್ಷ ವಿದ್ಯಾರ್ಥಿಗಳ ಪೈಕಿ (ಹೊಸಬರು, ಪುನರಾವರ್ತಿತ ಸೇರಿ) 4.17 ಲಕ್ಷ (ಶೇ.61.20) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಪಾಸಾದ 4.17 ಲಕ್ಷ ಮಕ್ಕಳಲ್ಲಿ 3.5 ಲಕ್ಷ ವಿದ್ಯಾರ್ಥಿಗಳು ರಾಜ್ಯದಲ್ಲಿರುವ 1800 ಖಾಸಗಿ, 415 ಸರ್ಕಾರಿ ಹಾಗೂ 392 ಅನುದಾನಿತ ಸೇರಿ ಒಟ್ಟು 2535 ಪದವಿ ಕಾಲೇಜುಗಳಲ್ಲಿ ವಿವಿಧ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕೋರ್ಸುಗಳಿಗೆ ಪ್ರವೇಶ ಪಡೆದಿದ್ದರು. ಉಳಿದವರು ವೃತ್ತಿಪರ ಕೋರ್ಸುಗಳು ಸೇರಿ ಬೇರೆ ಬೇರೆ ಕೋರ್ಸುಗಳನ್ನು ಸೇರಿದ್ದರು.

ಈ ಬಾರಿ ಕೋವಿಡ್‌ನಿಂದಾಗಿ ಪುನರಾವರ್ತಿತ ಅಭ್ಯರ್ಥಿಗಳನ್ನು ಹೊರತುಪಡಿಸಿ ಹೊಸ ಅಭ್ಯರ್ಥಿಗಳೆಲ್ಲರನ್ನೂ ಪರೀಕ್ಷೆ ಇಲ್ಲದೆ ಪಾಸು ಮಾಡಿದೆ. ಇದರಿಂದ 2020-21ರಲ್ಲಿ ಪರೀಕ್ಷೆ 6.72 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರೂ ಇದರಲ್ಲಿ ಹೊಸಬರ ಸಂಖ್ಯೆಯೇ 5.86 ಲಕ್ಷದಷ್ಟಿದೆ. ಅವರೆಲ್ಲರೂ ಉತ್ತೀರ್ಣರಾಗಿ ಉನ್ನತ ಶಿಕ್ಷಣಕ್ಕೆ ಅರ್ಹತೆ ಪಡೆಯುತ್ತಾರೆ.

ಇದರಲ್ಲಿ ಸುಮಾರು 1 ಲಕ್ಷ ಜನ ವೃತ್ತಿಪರ ಕೋರ್ಸು ಸೇರಿ ಇತರೆ ಕೋರ್ಸುಗಳತ್ತ ಮುಖ ಮಾಡಿದರೂ 4.5 ರಿಂದ 5 ಲಕ್ಷ ಜನ ಪದವಿ ಕೋರ್ಸುಗಳ ಪ್ರವೇಶಕ್ಕೆ ಮುಂದಾಗುವ ಸಾಧ್ಯತೆ ಇದೆ. ಇದರಿಂದ ಲಭ್ಯ ಸೀಟುಗಳಿಗಿಂತ ಪ್ರವೇಶಾಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಲಿದೆ. ಇದರಿಂದ ಕಾಲೇಜುಗಳ ಮೇಲೆ ಭಾರೀ ಒತ್ತಡ ನಿರ್ಮಾಣವಾಗಲಿದೆ.

ಸಣ್ ಸುದ್ದಿ

ಮಠಗಳಿಗೆ ವಿಜಯೇಂದ್ರ ಸಸ್ಪೆನ್ಸ್ ಭೇಟಿ

ಮೊದಲ ಪುಟದಿಂದ

'ಲ್ಯಾಪ್‌ಟಾಪ್ ತೆಗೆದುಕೊಂಡು ಮಠಗಳಿಗೆ ಭೇಟಿ ನೀಡಿದ್ದಾರೆ' ಎಂದು ಅವರು ನಿಗೂಢವಾದ ಹೇಳಿಕೆ ನೀಡಿದ್ದರು. ಹೀಗಾಗಿ, ಶಿವಕುಮಾರ್ ಅವರು ಹೇಳಿದಂತೆ ಯೋಗೇಶ್ವರ್ ಅವರ ಕಳೆದ ವಾರದ ಮಠಗಳ ಭೇಟಿಗೂ ಮತ್ತು ವಿಜಯೇಂದ್ರ ಅವರ ಈಗಿನ ಭೇಟಿಗೂ ಏನಾದರೂ ಸಂಬಂಧವಿದೆಯೇ ಎಂಬ ಚರ್ಚೆ ಬಿಜೆಪಿ ಪಾಳೆಯದಲ್ಲಿ ಬಲವಾಗಿ ನಡೆಯುತ್ತಿದೆ ಎನ್ನಲಾಗಿದೆ.

ವಿಜಯೇಂದ್ರ ಎಲ್ಲೆಲ್ಲಿಗೆ ಭೇಟಿ?: ವಿಜಯೇಂದ್ರ ಅವರು ಬುಧವಾರ ಸದ್ದಿಲ್ಲದೇ ಚಿತ್ರದುರ್ಗ ಜಿಲ್ಲೆಯಲ್ಲಿರುವ ಮಠಾಧಿಪತಿಗಳು ಹಾಗೂ ಹಿಂದುಳಿದ ಮಠಾಧಿಪತಿಗಳ ಒಕ್ಕೂಟದ ಸ್ವಾಮೀಜಿಗಳ ಭೇಟಿಯಾಗಿರುವುದು ತಡವಾಗಿ ವರದಿಯಾಗಿದೆ. ಸಿರಿಗೆರೆಗೆ ತೆರಳಿ ತರಳಬಾಳು ಡಾ. ಶಿವಕುಮಾರ ಶಿವಾಚಾರ್ಯರ ಭೇಟಿ ಮಾಡಿದ್ದಾರೆ. ನಂತರ ಚಿತ್ರದುರ್ಗಕ್ಕೆ ಆಗಮಿಸಿ ಮಾದಾರ ಚೆನ್ನಯ್ಯ ಗುರುಪೀಠಕ್ಕೆ ಭೇಟಿ ನೀಡಿ ಕೆಲ ಕಾಲ ಮಾತುಕತೆ ನಡೆಸಿದ್ದಾರೆ. ಇದಾದ ತರುವಾಯ ಬಸವಕೇಂದ್ರ ಮುರುಘಾಮಠಕ್ಕೆ ಭೇಟಿ ನೀಡಿ ಶಿವಮೂರ್ತಿ ಮುರುಘಾಶರಣರ ಸಂಗಡ ಒಂದು ತಾಸಿಗೂ ಹೆಚ್ಚು ಕಾಲ ಚರ್ಚೆ ಮಾಡಿದ್ದಾರೆ.

ಬಿಎಸ್‌ವೈ ಸ್ಥಾನ ಅಬಾಧಿತ ಎಂದು ಮನವರಿಕೆ: ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗುವಾಗ ನಾಡಿನ ಎಲ್ಲ ಮಠಾಧಿಪತಿಗಳ ಬೆಂಬಲವಿತ್ತು. ಅವರ ಕೃಪಾಶೀರ್ವಾದದಿಂದಲೇ ಯಡಿಯೂರಪ್ಪ ಆಡಳಿತ ನಡೆಸುತ್ತಿದ್ದು, ಇನ್ನೂ ಎರಡೂವರೆ ವರ್ಷ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಈ ಬಗ್ಗೆ ಆತಂಕ ಪಡುವುದು ಅಗತ್ಯವಿಲ್ಲ ಎಂದು ವಿಜಯೇಂದ್ರ ಅವರು ಸ್ವಾಮೀಜಿಗಳಿಗೆ ಮನವರಿಕೆ ಮಾಡಿಕೊಟ್ಟರು ಎನ್ನಲಾಗಿದೆ. ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ, ಭೋವಿ ಗುರು ಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಗಾಣಿಗ ಗುರುಪೀಠದ ಡಾ.ಬಸವಕುಮಾರ ಸ್ವಾಮೀಜಿ, ಭಗೀರಥ ಗುರಪೀಠದ ಪುರುಷೋತ್ತಮಾನಂದಪುರಿ, ಹಡಪದ ಗುರುಪೀಠದ ಅಪ್ಪಣ್ಣ ಸ್ವಾಮೀಜಿ, ದಾವಣಗೆರೆ ವಿರಕ್ತ ಮಠದ ಬಸವಪ್ರಭು ಸ್ವಾಮೀಜಿ, ಶಿರಸಿ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಮಡಿವಾಳ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ, ಮೇದಾರ ಗುರುಪೀಠದ ಬಸವ ಕೇತೇಶ್ವರ ಸ್ವಾಮೀಜಿ, ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ , ಖನಿಜ ನಿಗಮದ ಅಧ್ಯಕ್ಷ ಲಿಂಗಮೂರ್ತಿ ಈ ವೇಳೆ ಉಪಸ್ಥಿತರಿದ್ದರು.

ಸಿಎಂ ಬದಲಾವಣೆ ಇಲ್ಲ

ಮೊದಲ ಪುಟದಿಂದ

ಮುಖ್ಯಮಂತ್ರಿಗಳ ವಿರುದ್ಧ ಹೇಳಿಕೆ ನೀಡಿರುವ ಸಚಿವರು ಮತ್ತು ಇತರ ನಾಯಕರ ಜತೆ ಮಾತನಾಡುತ್ತೇನೆ. ಪಕ್ಷದ ಸಿದ್ಧಾಂತಕ್ಕೆ ಹೇಳಿಕೆ ನೀಡುವುದು ವಿರುದ್ಧವಾಗಿದೆ ಎಂದು ಇದೇ ವೇಳೆ ಖಡಕ್ಕಾಗಿ ಹೇಳಿದರು.

ಬಿಎಸ್‌ವೈರದ್ದು 'ವಿಶ್ವಾಸದ ಹೇಳಿಕೆ': ಹೈಕಮಾಂಡ್ ಬಯಸಿದರೆ ರಾಜೀನಾಮೆ ನೀಡುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿಕೆ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಸಿಂಗ್, ಹೈಕಮಾಂಡ್ ಮೇಲೆ ವಿಶ್ವಾಸವಿರುವುದರಿಂದ ಯಡಿಯೂರಪ್ಪ ಹಾಗೆ ಹೇಳಿದ್ದಾರೆ. ದೇಶದಲ್ಲಿನ ಎಲ್ಲ ಬಿಜೆಪಿ ಅಧ್ಯಕ್ಷರು, ನಾಯಕರು, ಪಕ್ಷ ಆಡಳಿತ ಇರುವ ಮುಖ್ಯಮಂತ್ರಿಗಳಿಗೆ ಪಕ್ಷದ ಹೈಕಮಾಂಡ್ ಮೇಲೆ ವಿಶ್ವಾಸ ಇರುತ್ತದೆ. ಹೈಕಮಾಂಡ್ ಬಗ್ಗೆ ಯಡಿಯೂರಪ್ಪ ಹೇಳಿರುವುದು ತಪ್ಪಿಲ್ಲ ಎಂದರು. ಪಕ್ಷದ ರಾಜ್ಯಾಧ್ಯಕ್ಷರ ಬದಲಾವಣೆ ಬಗ್ಗೆ ವದಂತಿ ಹಬ್ಬಿದೆಯಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯಾಧ್ಯಕ್ಷರ ಬದಲಾವಣೆ ಇಲ್ಲ. ಅದೆಲ್ಲ ವದಂತಿ. ನಳಿನ್‌ಕುಮಾರ್ ಕಟೀಲ್ ಅವರು ಪಕ್ಷದ ಸಂಘಟನೆಯನ್ನು ಉತ್ತಮವಾಗಿ ರಾಜ್ಯಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯಾಧ್ಯಕ್ಷರ ಬದಲಾವಣೆ ಕೇವಲ ಕಲ್ಪನೆ ಎಂದು ತಿಳಿಸಿದರು.

ಎಂಜಿನಿಯರಿಂಗ್ ಕಾಲೇಜಲ್ಲಿ ಬಿಎಸ್ಸಿ-ವರದಿ ನೀಡಿ: ಡಿಸಿಎಂ

ಅಧಿಕಾರಿಗಳು, ತಜ್ಞರೊಂದಿಗೆ ಸಚಿವರ ಮಹತ್ವದ ಸಮಾಲೋಚನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ರಾಜ್ಯದ ಎಂಜಿನಿಯರಿಂಗ್ ಕಾಲೇಜು ಗಳಲ್ಲಿ ವಿಜ್ಞಾನ ಆಧಾರಿತ ಕೋರ್ಸ್‌ಗಳ ಬೋಧನೆ ಆರಂಭಿಸುವ ಬಗ್ಗೆ ಪರಿಶೀಲನೆ ನಡೆಸಿ ಜುಲೈ ಅಂತ್ಯದೊಳಗೆ ವರದಿ ನೀಡುವಂತೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ಇಲಾಖೆಯ ಅಧಿಕಾರಿಗಳು ಮತ್ತು ತಜ್ಞರಿಗೆ ಸೂಚಿಸಿದ್ದಾರೆ.

ರಾಜ್ಯದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಸಂಬಂಧ ಗುರುವಾರ ಅಧಿಕಾರಿಗಳು ಮತ್ತು ತಜ್ಞರೊಂದಿಗೆ ಮಹತ್ವದ ಸಮಾಲೋಚನೆ ನಡೆಸಿದ ಡಾ.ಅಶ್ವತ್ಥ ನಾರಾಯಣ ಅವರು , ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಜ್ಞಾನ ಕೋರ್ಸುಗಳ ಬೋಧನೆ ಆರಂಭಿಸುವ ಕುರಿತ ಸಾಧಕ ಬಾಧಕಗಳ ಬಗ್ಗೆ ವರದಿ ನೀಡುವಂತೆ ಸೂಚಿಸಿದರು. ರಾಜ್ಯದಲ್ಲಿ ಇರುವ ಒಟ್ಟು 220 ಎಂಜಿನಿಯರಿಂಗ್ ಕಾಲೇಜುಗಳ ಪೈಕಿ 100 ಕಾಲೇಜುಗಳಲ್ಲಿ ಅತ್ಯುತ್ತಮ ಮೂಲಸೌಕರ್ಯಗಳಿವೆ. ಬಿಎಸ್ಸಿ ಮಾದರಿ ಯ 4 ವರ್ಷಗಳ ವಿಜ್ಞಾನ ಆಧಾರಿತ ಕೋರ್ಸುಗಳನ್ನು ಈ ಕಾಲೇಜುಗಳಲ್ಲಿ ಬೋಧಿಸುವ ಸಾಧ್ಯತೆ ಬಗ್ಗೆ ಜುಲೈ ಅಂತ್ಯದೊಳಗೆ ಕಾರ್ಯಸೂಚಿ ರೂಪಿಸಿ ವರದಿ ನೀಡುವಂತೆ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡ ಅವರ ನೇತೃತ್ವದ ಸಮಿತಿಗೆ ಸೂಚಿಸಿದರು.

ವಿಜ್ಞಾನ ಆಧಾರಿತ ಕೋರ್ಸ್ ಆರಂಭಿಸುವುದು ಈ ವರ್ಷವೇ ಇದು ಸಾಧ್ಯವೇ? ಏನಾದರೂ ಕಾನೂನು ತಡಕು ಬರಬಹುದೆ ಎಂದು ಪರಿಶೀಲಿಸಿ. ಕಾನೂನು ತೊಡಕಿದ್ದರೆ ಸುಗ್ರೀವಾಜ್ಞೆ ಜಾರಿಗೆ ತರಬೇಕಾಗುತ್ತದೆ.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನವನ್ನು ಯಾವ ರೀತಿ ಬೋಧಿಸಲಾಗುತ್ತಿದೆ ಎಂಬ ಬಗ್ಗೆ ಮಾಹಿತಿ ಪಡೆಯಿರಿ. ಅದೇ ರೀತಿಯಲ್ಲಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಜ್ಞಾನ ಕಲಿಕೆ ಹಾಲಿ ಇರುವ ಮೂಲ ಸೌಕರ್ಯದಿಂದಲೇ ಈ ಸುಧಾರಣೆಯನ್ನು ಜಾರಿಗೆ ತರಲು ಸಾಧ್ಯವೇ ಎಂಬುದರ ಬಗ್ಗೆ ವರದಿಯಲ್ಲಿ ಉಲ್ಲೇಖ ಮಾಡುವಂತೆ ನಿರ್ದೇಶನ ನೀಡಿದರು.

5 ಲಕ್ಷ ಜನಕ್ಕೆ ಚೀನಿ ಆ್ಯಪ್ 300 ಕೋಟಿ ದೋಖಾ!

ಮೊದಲ ಪುಟದಿಂದ

ಇದರಲ್ಲಿ ಗಂಟೆ ಮತ್ತು ದಿನಗಳ ಲೆಕ್ಕದಲ್ಲಿ ಠೇವಣಿ ಇಟ್ಟವರ ಆನ್‌ಲೈನ್ ಖಾತೆಗೆ ಹಣ ಜಮೆ ಆಗುತ್ತಿತ್ತು. ಆರಂಭದಲ್ಲಿ ಜನರ ವಿಶ್ವಾಸಗಳಿಸಲು ಗಂಟೆ ಲೆಕ್ಕದಲ್ಲಿ ಶೇ.5ರಿಂದ ಶೇ.10ರಷ್ಟು ಬಡ್ಡಿ ಹಣ ಜಮೆ ಮಾಡಲಾಗುತ್ತಿತ್ತು. ಹೀಗೆ ಹಣ ಪಡೆದವರು ಮಲ್ಟಿಲೆವೆಲ್ ಮಾರ್ಕೆಂಟಿಂಗ್‌ನಲ್ಲಿ ಮಾಡುವಂತೆ ತಮ್ಮ ಪರಿಚಯದವರನ್ನೂ ಠೇವಣಿ ಇಡಲು ಆಹ್ವಾನಿಸುತ್ತಿದ್ದರು.

ಹೀಗೆ ಆರಂಭದಲ್ಲಿ ಹಣ ನೀಡಿದ ಬಳಿಕ ಖಾತೆ ಬ್ಲಾಕ್ ಮಾಡಿ ಅವರಿಗೆ ವಂಚನೆ ಮಾಡಲಾಗುತ್ತಿತ್ತು. ಈ ಕುರಿತು ಮಾಹಿತಿ ನೀಡಿರುವ ದೆಹಲಿ ಪೊಲೀಸ್ ಆಯುಕ್ತ ಎಸ್. ಎಸ್.ಶ್ರೀವಾಸ್ತವ, 'ವಂಚಕರು ಅಂದಾಜು 5 ಲಕ್ಷ ಗ್ರಾಹಕರಿಂದ 2 ತಿಂಗಳಲ್ಲಿ 250-300 ಕೋಟಿ ರು. ಲೂಟಿ ಮಾಡಿದ್ದಾರೆ. ಪ್ರಕರಣದಲ್ಲಿ ಭಾಗಿಯಾಗಿದ್ದ ದಿಲ್ಲಿಯ 2 ಲೆಕ್ಕಪರಿಶೋಧಕರು, ಒಬ್ಬ ಟಿಬೆಟನ್ ಮಹಿಳೆ, ಇತರ 9 ಮಂದಿಯನ್ನು ಬಂಧಿಸಲಾಗಿದೆ.

ಗ್ರಾಹಕರಿಂದ ದೋಚಿ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿದ್ದ 11 ಕೋಟಿ ರು.ಗಳನ್ನು ಬ್ಲಾಕ್ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಜೊತೆಗೆ ಚೀನಾ ವಂಚಕರ ಏಜೆಂಟನಂತೆ ಕೆಲಸ ಮಾಡುತ್ತಿದ್ದ ಗುರುಗ್ರಾಮ ಮೂಲದ ಲೆಕ್ಕಪರಿಶೋಧಕ 110 ನಕಲಿ ಕಂಪನಿಗಳನ್ನು ಸೃಷ್ಟಿಸಿ, ಅದನ್ನು ಪ್ರತಿಯೊಂದಕ್ಕೂ 2-3 ಲಕ್ಷ ರು.ನಂತೆ ಚೀನಿಯರಿಗೆ ಮಾರಿದ್ದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಪೈಕಿ ಪವರ್ ಬ್ಯಾಂಕ್ ಕಂಪನಿಯನ್ನು ಬೆಂಗಳೂರು ಮೂಲದ ಸ್ಟಾರ್ಟಪ್ ಎಂದು ಬಿಂಬಿಸಲಾಗಿತ್ತಾದರೂ ಅದರ ಸರ್ವರ್‌ಗಳು ಚೀನಾದಲ್ಲಿದ್ದವು. ಆ್ಯಪ್ ಡೌನ್‌ಲೋಡ್ ಮಾಡಿಕೊಂಡವರ ಮೊಬೈಲ್‌ನ ವಿವರಗಳನ್ನೆಲ್ಲ ಕದಿಯ ಲಾಗುತ್ತಿತ್ತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪಾಕಿಸ್ತಾನದ ಮಹಿಳೆ ಅರೆಸ್ಟ್

ಮೊದಲ ಪುಟದಿಂದ

ಮದುವೆಯ ನಂತರ ಈಕೆ 2014ರಲ್ಲಿ ಮೂರು ತಿಂಗಳ ವಿಸಿಟಿಂಗ್ ವೀಸಾದೊಂದಿಗೆ ಭಟ್ಕಳಕ್ಕೆ ಬಂದು ವಾಪಸ್ ಪಾಕಿಸ್ತಾನಕ್ಕೆ ಹಿಂತಿರುಗಿದ್ದಳು. ಬಳಿಕ 2015ರಲ್ಲಿ ದಾಖಲೆಗಳಿಲ್ಲದೆ ಭಾರತಕ್ಕೆ ನುಸುಳಿ ಬಂದಿದ್ದು, ಭಟ್ಕಳದ ನವಾಯತ ಕಾಲೋನಿಯ ಪತಿಯ ಮನೆ 'ವೈಟ್‌ಹೌಸ್'ನಲ್ಲಿ ವಾಸಿಸುತ್ತಿದ್ದಳು. ಇವರಿಗೆ ಮೂವರು ಮಕ್ಕಳಿದ್ದಾರೆ.

ವಿದೇಶಿಗರ ಅಕ್ರಮ ವಾಸ್ತವ್ಯ ಕಾಯ್ದೆ ಕಲಂ 14, 14 (ಎ),(ಬಿ), ಹಾಗೂ ಐಪಿಸಿ ಕಲಂ 468 ಹಾಗೂ 471ರ ಅಡಿಯಲ್ಲಿ ಕೇಸು ದಾಖಲಿಸಿಕೊಳ್ಳಲಾಗಿದೆ. ಮಹಿಳೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿರುವ ಪೊಲೀಸರು ಸಮಗ್ರ ತನಿಖೆ ಕೈಗೊಂಡಿದ್ದಾರೆ.

ಅಕ್ರಮ ವಾಸ್ತವ್ಯದ ಬಗ್ಗೆ ಗುಮಾನಿ: ಪಾಕಿಸ್ತಾನದವಳಾದ ಈಕೆ ಭಟ್ಕಳದಲ್ಲಿ ವಾಸ್ತವ್ಯ ಮಾಡುತ್ತಿರುವ ಕುರಿತು ಕೇಂದ್ರ ಗುಪ್ತಚರ ವಿಭಾಗ ಗುಮಾನಿ ಹೊಂದಿತ್ತು ಎನ್ನಲಾಗಿದೆ.

ಗುಪ್ತಚರ ಮಾಹಿತಿ ಆಧರಿಸಿ ಖಚಿತ ಮಾಹಿತಿ ಕಲೆ ಹಾಕಿದ ಪೊಲೀಸರು ಈಕೆ ಅಕ್ರಮವಾಗಿ ನೆಲೆಸಿರುವುದನ್ನು ಖಚಿತಪಡಿಸಿ ಕೊಂಡು ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆದು ಬುಧವಾರ ರಾತ್ರಿ ಮನೆ ಯನ್ನು ಶೋಧಿಸಿದಾಗ ಈಕೆ ಪತ್ತೆಯಾಗಿದ್ದಾಳೆ.

ಆಧಾರ್, ಪಾನ್, ಪಡಿತರ ಚೀಟಿ, ಎಪಿಕ್ ಕಾರ್ಡ್ ಎಲ್ಲವೂ ಇದೆ!

ಕಳೆದ ಎಂಟು ವರ್ಷಗಳಿಂದ ಅಕ್ರಮವಾಗಿ ನೆಲೆಸಿದ ಪಾಕಿಸ್ತಾನಿ ಮಹಿಳೆ ಖತೀಜಾ ಮೆಹರಿನ್‌ಳ ಬಳಿ ಭಟ್ಕಳದ್ದೇ ಎನ್ನಲಾದ ಜನನ ಪ್ರಮಾಣ ಪತ್ರ, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಪಾನ್ ಕಾರ್ಡ್ ಇರುವುದು ಪತ್ತೆಯಾಗಿದೆ. ಇವುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಇವುಗಳೆಲ್ಲವೂ ಈಕೆಗೆ ಹೇಗೆ ದೊರೆತವು ಎನ್ನುವುದು ತೀವ್ರ ಕುತೂಹಲಕಾರಿಯಾಗಿದೆ. ಈಕೆಯು ಪಾಕಿಸ್ತಾನದಲ್ಲಿ ಜನಿಸಿ ಅಲ್ಲಿನ ನಾಗರಿಕಳಾಗಿರುವಾಗ ಬಹಳ ನಾಜೂಕಾಗಿ ಇಲ್ಲಿ ತನ್ನ ದಾಖಲೆಗಳನ್ನೆಲ್ಲಾ ಮಾಡಿಸಿಕೊಂಡಿರ ಬಹುದು ಎನ್ನುವ ಗುಮಾನಿಯೂ ವ್ಯಕ್ತವಾಗಿದೆ.

11 ಜಿಲ್ಲೆ ಲಾಕ್ ವಿಸ್ತರಣೆ: 19 ಜಿಲ್ಲೆ ಮಿನಿ ಅನ್‌ಲಾಕ್

ಮೊದಲ ಪುಟದಿಂದ

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಗುರುವಾರ ಹಿರಿಯ ಸಚಿವರು ಮತ್ತು ಅಧಿಕಾರಿಗಳ ಜತೆ ಸುಮಾರು ಒಂದೂವರೆ ಗಂಟೆಗಿಂತ ಹೆಚ್ಚು ಕಾಲ ಸಮಾಲೋಚನೆ ನಡೆಸಿದ ಬಳಿಕ ತುರ್ತು ಪತ್ರಿಕಾಗೋಷ್ಠಿ ನಡೆಸಿ ಸಡಿಲಿಕೆ ತೀರ್ಮಾನ ಪ್ರಕಟಿಸಿದರು.

ವೀಕೆಂಡ್, ರಾತ್ರಿ ಕರ್ಫ್ಯೂ ಯಥಾಸ್ಥಿತಿ: ನಿರ್ಬಂಧ ಸಡಿಲಿಕೆಯಾಗುವ ಜಿಲ್ಲೆಗಳಲ್ಲೂ ಪ್ರತಿದಿನ ರಾತ್ರಿ 7 ಗಂಟೆಯಿಂದ ಬೆಳಗ್ಗೆ 5 ಗಂಟೆವರೆಗೆ ಕೋವಿಡ್ ಕರ್ಫ್ಯೂ ಜಾರಿಯಲ್ಲಿರಲಿದೆ. ವಾರಂತ್ಯದ ಕರ್ಫ್ಯೂ ಶುಕ್ರವಾರ ರಾತ್ರಿ 7 ಗಂಟೆಯಿಂದ ಸೋಮವಾರ ಬೆಳಗ್ಗೆ 5 ಗಂಟೆಯವರೆಗೆ ಜಾರಿಯಲ್ಲಿರುತ್ತದೆ.

19 ಜಿಲ್ಲೆಗಳಲ್ಲಿ ಎಲ್ಲ ರೀತಿಯ ಕಾರ್ಖಾನೆಗಳನ್ನು ಶೇ.50ರಷ್ಟು ಸಿಬ್ಬಂದಿಯ ಹಾಜರಾತಿಯೊಂದಿಗೆ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ. ಆದರೆ, ಗಾರ್ಮೆಂಟ್ಸ್ ವಲಯಗಳು ಶೇ.30ರಷ್ಟು ಸಿಬ್ಬಂದಿಯ ಹಾಜರಿಯೊಂದಿಗೆ ಕಾರ್ಯನಿರ್ವಹಿಸಬೇಕು.

ಎಲ್ಲ ಅಗತ್ಯ ವಸ್ತುಗಳ ಖರೀದಿಯ ಅಂಗಡಿಗಳನ್ನು ಪ್ರಸ್ತುತ ಇರುವ ಕಾಲಾವಕಾಶವನ್ನು ವಿಸ್ತರಣೆ ಮಾಡಲಾಗಿದೆ. ಬೆಳಗ್ಗೆ 6 ಗಂಟೆಯಿಂದ 10 ಗಂಟೆವರೆಗೆ ಇದ್ದ ಕಾಲಾವಕಾಶವನ್ನು ಮಧ್ಯಾಹ್ನ 2 ಗಂಟೆವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಎಲ್ಲ ನಿರ್ಮಾಣ ಚಟುವಟಿಕೆಗಳನ್ನು ಪ್ರಾರಂಭಿಸಲು ಅವಕಾಶ ನೀಡಲಾಗಿದೆ. ನಿರ್ಮಾಣ ಚಟುವಟಿಕೆ ಸಂಬಂಧಿಸಿದ ಅಂಗಡಿಗಳನ್ನು ವಿಶೇಷವಾಗಿ ಸಿಮೆಂಟ್ ಮತ್ತು ಸ್ಟೀಲ್ ತೆರೆಯಬಹುದು. ಪಾರ್ಕ್‌ಗಳನ್ನು ಬೆಳಗ್ಗೆ 5 ಗಂಟೆಯಿಂದ 10ಗಂಟೆಯವರೆಗೆ ತೆರೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

ಬೀದಿ ಬದಿ ವ್ಯಾಪಾರಿಗಳು ಬೆಳಗ್ಗೆ 6ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವ್ಯಾಪಾರ ಮಾಡಲು ಅವಕಾಶ ನೀಡಲಾಗಿದೆ. ಆಟೋ ಮತ್ತು ಟ್ಯಾಕ್ಸಿಗಳಲ್ಲಿ ಇಬ್ಬರು ಪ್ರಯಾಣಿಕರಿಗೆ ಅವಕಾಶ ಒದಗಿಸಲಾಗಿದೆ.

ಬಸ್ಸು ಓಡಾಟಕ್ಕೆ ಅವಕಾಶವಿಲ್ಲ: ಆದರೆ, ಜನರ ಓಡಾಟಕ್ಕೆ ಕಡಿವಾಣ ಹಾಕಲು ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಸಂಚಾರಕ್ಕೆ ಅನುಮತಿ ಇಲ್ಲ. ಜತೆಗೆ ಯಾವುದೇ ಸಾರ್ವಜನಿಕ ಸಭೆಗಳಿಗೂ ಅವಕಾಶ ಇಲ್ಲ. ಆದರೆ ಅಂತರ್ ಜಿಲ್ಲೆ ಮತ್ತು ರಾಜ್ಯ ಓಡಾಟಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು.

ನೀಟ್ ಪರೀಕ್ಷೆ ಮುಂದೂಡಿಕೆ ಪ್ರಶ್ನಿಸಿದ್ದ ಅರ್ಜಿ ವಜಾ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪ್ರಸಕ್ತ ಶೈಕ್ಷಣಿಕ ಸಾಲಿನ ವೈದ್ಯಕೀಯ ಸ್ನಾತಕೋತ್ತರ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಮುಂದೂಡಿರುವ ಕೇಂದ್ರ ಸರ್ಕಾರದ ಕ್ರಮ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ನೀಟ್ ಪರೀಕ್ಷೆ ಮುಂದೂಡುವ ನಿರ್ಧಾರ ಕೈಬಿಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಹುಬ್ಬಳ್ಳಿಯ ಜಿ.ಬಿ. ಕುಲಕರ್ಣಿ ಮೆಮೋರಿಯಲ್ ಲೀಗಲ್ ಟ್ರಸ್ಟ್ ನ ಡಾ. ವಿನೋದ್ ಕುಲಕರ್ಣಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಆದೇಶ ಮಾಡಿತು. ಕೇಂದ್ರ ಸರ್ಕಾರ ಕೋವಿಡ್ ಪರಿಸ್ಥಿತಿ ಆಧರಿಸಿ ತಜ್ಞರೊಂದಿಗೆ ಚರ್ಚಿಸಿದ ಬಳಿಕ ನೀಟ್ ಪರೀಕ್ಷೆ ಮುಂದೂಡಿದೆ. ಅದರಲ್ಲಿ ಯಾವುದೇ ತಪ್ಪು ಕಾಣುತ್ತಿಲ್ಲ ಎಂದು ಅಭಿಪ್ರಾಯಪಟ್ಟ ಹೈಕೋರ್ಟ್, ಅರ್ಜಿ ವಜಾಗೊಳಿಸಿತು. ಕೇಂದ್ರ ಸರ್ಕಾರಿ ವಕೀಲರು, ನೀಟ್ ಪರೀಕ್ಷೆಗಳನ್ನು ರದ್ದುಪಡಿಸಲಾಗಿಲ್ಲ. ಆಗಸ್ಟ್ 31ರ ಬಳಿಕ ಒಂದು ತಿಂಗಳು ಸಿದ್ಧತೆ ಅವಕಾಶ ನೀಡಿ ನೀಟ್ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.

ಕೋವಿಡ್‌ನಿಂದ ರಾಜ್ಯದಲ್ಲಿ 32 ಮಕ್ಕಳು ಅನಾಥ

ಗದಗ/ಕೊಪ್ಪಳ: ಕೋವಿಡ್ ಸೋಂಕಿನ 2ನೇ ಅಲೆಯಿಂದಾಗಿ ತಂದೆ- ತಾಯಿಯನ್ನು ಕಳೆದುಕೊಂಡು ರಾಜ್ಯದಲ್ಲಿ ಒಟ್ಟು 32 ಮಕ್ಕಳು ಅನಾಥರಾಗಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಶಶಿಕಲಾ ಜೊಲ್ಲೆ ಮಾಹಿತಿ ನೀಡಿದ್ದಾರೆ. ಇದೇವೇಳೆ ಈ ರೀತಿ ಅನಾಥರಾಗಿರುವ ಮಕ್ಕಳ ಪಟ್ಟಿಯಿಂದ ಬಿಟ್ಟು ಹೋಗಿರುವ ಬಗ್ಗೆ ಮಾಹಿತಿ ಬರುತ್ತಿರುವ ಹಿನ್ನೆಲೆಯಲ್ಲಿ ಮರುಸರ್ವೇ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಕೋವಿಡ್ ಸೋಂಕಿಗೆ ಮೃತಪಟ್ಟು ತಬ್ಬಲಿಯಾದ ಮಕ್ಕಳಿಗೆ ರಾಜ್ಯ ಸರ್ಕಾರದಿಂದ 'ಬಾಲಸೇವಾ ಯೋಜನೆ' ಜಾರಿ ತರಲಾಗಿದೆ. ಅನಾಥ ಮಕ್ಕಳ ಪೋಷಕರಿಗೆ ಪ್ರತಿ ತಿಂಗಳು ₹3500 ನೀಡಲಾಗುವುದು. 10 ನೇ ತರಗತಿ ವರೆಗೆ ಉಚಿತ ಶಿಕ್ಷಣ, ಲ್ಯಾಪ್‌ಟಾಪ್ ಒದಗಿಸಲಾಗುವುದು ಎಂದರು.